# ಜಿಲ್ಲಾಧಿಕಾರಿಗಳ ನ್ಯಾಯಾಲಯ, ಕೋಲಾರ ಜಿಲ್ಲೆ, ಕೋಲಾರ

ದಿನಾಂಕ:13/07/2016

ಪ್ರಕರಣ ಸಂಖ್ಯೆ: ಆರ್ಎ. 109/2014-15

ಉಪಸ್ಥಿತರು:ಶ್ರೀ.ಡಾ॥ ಕೆ.ವಿ.ತ್ರಿಲೋಕ್ ಚಂದ್ರ ಭಾ.ಆ.ಸೇ.,
ಜಿಲ್ಲಾಧಿಕಾರಿಗಳು,
ಕೋಲಾರ ಜಿಲ್ಲೆ.

| ಮೇಲ್ಮನವಿದಾರರು | ವಿರುದ್ಧ | ಎದುರುದಾರರು |
|---|---|---|
| 1. ಶ್ರೀಮತಿ ನಾರಾಯಣಮ್ಮ ಕೆ.ಎಂ ಕೋಂ ಎಸ್.ದಾಸಪ್ಪ<br>2. ಡಿ. ರವಿಕುಮಾರ್ ಬಿನ್ ಎಸ್ ದಾಸಪ್ಪ<br>-ಕ್ರಸಂ. 1 ಮತ್ತು 4 ವಾಸ ನಂ. 924, 4ನೇ ಕ್ರಾಸ್, 16ನೇ ಮೇನ್ ಎಂ.ಐ.ಸಿ.ಓ ಲೇಔಟ್, ಬಿ.ಟಿ.ಎಂ, 2ನೇ ಸ್ಟೇಜ್ ಬೆಂಗಳೂರು.<br>( ಶ್ರೀ ಟಿ. ವೆಂಕಟರೆಡ್ಡಿ -ವಕೀಲರು ರವರಿಂದ) | | 1. ಸಹಾಯಕ ಕಮೀಷನರ್ ಕೋಲಾರ ಉಪವಿಭಾಗ<br>2. ತಹಶೀಲ್ದಾರ್ ಮುಳಬಾಗಲು ತಾಲ್ಲೂಕು<br>3. ರಾಜಸ್ವ ನೀರಿಕ್ಷಕರು ಆವಣಿ ಹೋಬಳಿ ಮುಳಬಾಗಲು ತಾಲ್ಲೂಕು |

ವಿಷಯ: ಸಹಾಯಕ ಕಮೀಷನರ್ ಕೋಲಾರ ಉಪವಿಭಾಗ, ಕೋಲಾರ ರವರ ಕ್ರಮಾಂಕ: ಆರ್.ಎ.454/2012-13 ದಿನಾಂಕ: 10/02/2015.. ರ ಆದೇಶದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

0-0-0

**ಪ್ರಸ್ತಾವನೆ.**

ಈ ಮೇಲ್ಮನವಿ ಅರ್ಜಿಯನ್ನು ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ಕಲಂ 49 ರಂತೆ ಸಲ್ಲಿಸಿರುತ್ತಾರೆ.

**ಪ್ರಕರಣದ ಸಂಕ್ಷಿಪ್ತ ವಿವರ,**

ಮುಳಬಾಗಲು ತಾಲ್ಲೂಕು, ಆವಣಿ ಹೋಬಳಿ, ಜಮ್ಮನಹಳ್ಳಿ ಗ್ರಾಮದ ಸ.ನಂ. 103/9, 103/10, 103/11, 103/12 ಮತ್ತು 103/13 ರಲ್ಲಿ ತಲಾ 4-00 ಎಕರೆ ಜಮೀನಿಗೆ ಸಂಬಂಧಿಸಿದಂತೆ ಫಹಣಿ ಪತ್ರಿಕೆಯಲ್ಲಿರುವ ದಾಖಲೆ ಖೊಟ್ಟಿ ಎಂದು ದೃಢಪಟ್ಟ ಮೇರೆಗೆ ತಹಶೀಲ್ದಾರ್, ಮುಳಬಾಗಲು ತಾಲ್ಲೂಕು ರವರು ತಮ್ಮ ಹುಕ್ಕುಂ ಕ್ರಮಾಂಕ:ಎಲ್.ಎನ್.ಡಿ/ಸಿ.ಆರ್/15/2009-10 ದಿನಾಂಕ: 01/07/2011 ರಂತೆ ಸರ್ಕಾರದ ವಶಕ್ಕೆ ಪಡೆದು ಆದೇಶಿಸಿರುತ್ತಾರೆ. ಈ ಆದೇಶವನ್ನು ಪ್ರಶ್ನಿಸಿ ನಾರಾಯಣಮ್ಮ ಕೆ.ಎಂ. ಕೋಂ ಎಸ್. ದಾಸಪ್ಪ ಮತ್ತು ಡಿ.ರವಿಕುಮಾರ್ ಬಿನ್ ದಾಸಪ್ಪ ರವರು ಸಹಾಯಕ ಕಮೀಷನರ್, ಕೋಲಾರ ಉಪವಿಭಾಗ ರವರಲ್ಲಿ ಮೇಲ್ಮನವಿ ಸಲ್ಲಿಸಿದ್ದರ ಮೇರೆಗೆ ವಿಚಾರಣೆ ನಂತರ ನಂ.ಆರ್.ಎ.454/2012-13 ದಿನಾಂಕ:10/02/2015 ರಂದು ಹೊರಡಿಸಿದ ಆದೇಶದಲ್ಲಿ ಇವರ ಮೇಲ್ಮನವಿ ಅರ್ಜಿಯನ್ನು ವಜಾಕರಿಸಿ, ತಹಶೀಲ್ದಾರರ ಆದೇಶವನ್ನು ಎತ್ತಿಹಿಡಿದಿರುತ್ತಾರೆ. ಈ ಆದೇಶದಿಂದ ಬಾದಿತರಾದ ಮೇಲ್ಮನವಿದಾರರು ಈ ನ್ಯಾಯಾಲಯದಲ್ಲಿ ಪ್ರಸ್ತುತ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಪ್ರಕರಣವನ್ನು ದಾಖಲಿಸಿಕೊಂಡು ಉಭಯತ್ರರಿಗೂ ನೋಟೀಸು ನೀಡಿ ವಿಚಾರಣೆ ಮಾಡಿ ದಿನಾಂಕ:13/04/2016 ರಂದು ಆದೇಶಕ್ಕಾಗಿ ಕಾಯ್ದಿರಿಸಲಾಯ್ತು.

ಮೇಲ್ಮನವಿದಾರರು ತಮ್ಮ ಮೇಲ್ಮನವಿಯಲ್ಲಿ ಮುಳಬಾಗಲು ತಾಲ್ಲೂಕು, ಆವಣಿ ಹೋಬಳಿ, ಜಮ್ಮನಹಳ್ಳಿ ಗ್ರಾಮದ ಸ.ನಂ. 103/9, 103/10, 103/11, 103/12 ಮತ್ತು 103/13 ರಲ್ಲಿ ತಲಾ 4-00 ಒಟ್ಟು 20-00 ಎಕರೆ ಜಮೀನು ಮೂಲತಃ ಎಂ.ಆರ್.ವೆಂಕಟೇಶ್ ಅಯ್ಯರ್ ರವರಿಗೆ ಸೇರಿದ್ದು, ಇವರ ಫವತಿ ನಂತರ ಇವರ ಮಕ್ಕಳಾದ ಎಂ.ವಿ.ಸುಬ್ರಮಣ್ಯಂ ಹಾಗೂ ಎಂ.ವಿ.ಎನ್.ರಾಜ್ ರವರು ಎಸ್.ದಾಸಪ್ಪ ರವರಿಗೆ 09/12/1991 ರಂದು

...2

ಮಾರಾಟ ಮಾಡಿರುತ್ತಾರೆ. ಇದರಂತೆ ಎಸ್.ದಾಸಪ್ಪ ರವರಿಗೆ ಎಂ.ಆರ್ 79-15/91-92 ರಂತೆ ಖಾತೆ ಅಗಿರುತ್ತದೆ. ನಂತರ ಎಸ್.ದಾಸಪ್ಪ ರವರು ದಿನಾಂಕ:01/09/2006 ರಂದು ಸಂಖ್ಯೆ:1620/2006-07 ರಂತೆ ಮೇಲ್ಮನವಿದಾರರಿಗೆ ದಾನ ಮಾಡಿರುತ್ತಾರೆ ಎಂಬುದಾಗಿ ನಿವೇದಿಸಿರುತ್ತಾರೆ. ವಿವಾದಿತ ಜಮೀನಿಗೆ ಸಂಬಂಧಿಸಿದಂತೆ ಎಸ್.ವೆಂಕಟೇಶಪ್ಪ ಹಾಗೂ ಜಯಮ್ಮ ರವರು ಎಸ್.ದಾಸಪ್ಪ ರವರ ವಿರುದ್ಧ ವಿಭಾಗದ ದಾವೆ ಸಂಖ್ಯೆ: ಓ.ಎಸ್.342/2006 ರಂತೆ ಪ್ರಕರಣವು ಸಿವಿಲ್ ನ್ಯಾಯಾಲಯದಲ್ಲಿ ದಾಖಲಾಗಿದ್ದು ಈ ಪ್ರಕರಣವು ರಾಜಿ ಮುಖೇನ ಎಸ್.ದಾಸಪ್ಪನವರ ಭಾಗಕ್ಕೆ ಸೇರಿರುವುದಾಗಿ ಇತ್ಯರ್ಥವಾಗಿದೆಯೆಂದು ತಿಳಿಸಿರುತ್ತಾರೆ. ತಹಶೀಲ್ದಾರ್, ಮುಳಬಾಗಲು ತಾಲ್ಲೂಕು ರವರು ಮೇಲ್ಮನವಿದಾರರಿಗೆ ಯಾವುದೇ ನ್ಯಾಯಯುತ ಅವಕಾಶ ನೀಡದೆ ಪಹಣಿಯಲ್ಲಿದ್ದ ದಾಖಲೆಗಳನ್ನು ರದ್ದುಪಡಿಸಿರುವುದು ಕಾನೂನು ಬಾಹಿರವೆಂದು ವಾದಿಸಿ, ಸಂಖ್ಯೆ: ಐ.ಎಲ್.ಆರ್.2005(4) 5084 ಹಾಗೂ ಐ.ಎಲ್.ಆರ್ 2006 ಕೆ.ಎ.ಆರ್ 3018 ರ ತೀರ್ಪುಗಳನ್ನು ಉಲ್ಲೇಖಿಸಿರುತ್ತಾರೆ. ಈ ಎಲ್ಲಾ ಅಂಶಗಳನ್ನು ಪರಿಗಣಿಸದೇ ಮಾಡಿರುವ ಸಹಾಯಕ ಕಮೀಷನರ್ ರವರ ಪ್ರಶ್ನಿತ ಆದೇಶವನ್ನು ರದ್ದುಪಡಿಸುವ ಮೂಲಕ ತಮ್ಮ ಮೇಲ್ಮನವಿ ಅರ್ಜಿಯನ್ನು ಪುರಸ್ಕರಿಸುವಂತೆ ಕೋರಿರುತ್ತಾರೆ.

ಮೇಲ್ಮನವಿದಾರರ ವಕೀಲರ ವಾದ ಹಾಗೂ ಕಡತದಲ್ಲಿ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಲಾಯ್ತು. ಮುಳಬಾಗಲು ತಾಲ್ಲೂಕು, ಆವಣಿ ಹೋಬಳಿ, ಜಮ್ಮನಹಳ್ಳಿ ಗ್ರಾಮದ ವಿವಾದಿತ ಸ.ನಂ. 103 ಸರ್ಕಾರಿ ಗೋಮಾಳವಾಗಿರುತ್ತದೆ. ಸರ್ಕಾರಿ ಜಮೀನುಗಳನ್ನು ಸಂರಕ್ಷಿಸುವುದು ಕಂದಾಯ ಇಲಾಖೆಯ ಆದ್ಯ ಕರ್ತವ್ಯವಾಗಿರುವುದರಿಂದ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಲಾಯ್ತು. ಈ ಪ್ರಕರಣದಲ್ಲಿ ಎಂ.ಆರ್.ವೆಂಕಟೇಶ್ ಅಯ್ಯರ್ ರವರಿಗೆ ನಿಯಮಾನುಸಾರ ಸಕ್ಷಮ ಪ್ರಾಧಿಕಾರದಿಂದ ಭೂ ಮಂಜೂರು ಆಗಿರುವುದಕ್ಕೆ ಯಾವುದೇ ದಾಖಲೆ ಇರುವುದಿಲ್ಲ ಹಾಗೂ ಈ ಬಗ್ಗೆ ಯಾವುದೇ ಅಧಿಕೃತ ದಾಖಲೆಗಳನ್ನು ಮೇಲ್ಮನವಿದಾರರು ಹಾಜರುಪಡಿಸಿರುವುದಿಲ್ಲ. ವಿವಾದಿತ ಜಮೀನು ಮಂಜೂರಾಗಿರುವ ಬಗ್ಗೆ ದೃಢಪಡದ ಕಾರಣ ನಂತರದ ವಹಿವಾಟು ತನ್ನಿಂತಾನೆ ಅನೂರ್ಜಿತ ಮತ್ತು ಪರಿಣಾಮಶೂನ್ಯವಾಗಿರುತ್ತದೆ (Null and void). ಆದ್ದರಿಂದ, ಅವರ ಮೇಲ್ಮನವಿಯಲ್ಲಿ ಸಮರ್ಥನೆ (No substance) ಇರುವುದಿಲ್ಲ.

## ಆದೇಶ

ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಿದೆ. ಕೆಳನ್ಯಾಯಾಲಯದ ಪ್ರಶ್ನಿತ ಆದೇಶವನ್ನು ಎತ್ತಿಹಿಡಿದಿದೆ. ಹಾಗೂ ಕೊಟ್ಟ ದಾಖಲೆ ಸೃಷ್ಟಿಸಿರುವ ವ್ಯಕ್ತಿಗಳ ಮೇಲೆ ನಿಯಮಾನುಸಾರ ಕ್ರಮ ಜರುಗಿಸಲು ತಹಶೀಲ್ದಾರ್, ಮುಳಬಾಗಿಲು ತಾಲ್ಲೂಕು ರವರಿಗೆ ನಿರ್ದೇಶಿಸಿ ಆದೇಶಿಸಿದೆ.

ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ನೀಡಿ, ಬೆರಳಚ್ಚು ಮಾಡಿಸಿ ಪರಿಷ್ಕರಿಸಿದೆ. ನಂತರ ದಿನಾಂಕ:13/07/2016 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಿದೆ.

C.V. Shilakanth

ಜಿಲ್ಲಾಧಿಕಾರಿಗಳು,
ಕೋಲಾರ ಜಿಲ್ಲೆ.

ಜಿಲ್ಲಾಧಿಕಾರಿಗಳ ಪರವಾಗಿ
ಕೋಲಾರ ಜಿಲ್ಲೆ.
6/8/16